ಈ ಪ್ರಶ್ನೆಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು.

ವರ್ಷನ್ ಕೋಡ್ **A**

**ವಿಷಯ ಸಂಕೇತ : 36**

ಕ್ರಮ ಸಂಖ್ಯೆ :

# ಪ್ರಶ್ನೆಪುಸ್ತಿಕೆ
# ನಿರ್ದಿಷ್ಟ ಪತ್ರಿಕೆ
## (ಪತ್ರಿಕೆ-II)

ಗರಿಷ್ಠ ಸಮಯ : **2** ಗಂಟೆಗಳು

ಗರಿಷ್ಠ ಅಂಕಗಳು : **200**

## ಸೂಚನೆಗಳು

1. ಪರೀಕ್ಷೆ ಪ್ರಾರಂಭಗೊಂಡ ತಕ್ಷಣವೇ ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಪ್ರಶ್ನೆ ಪತ್ರಿಕೆ ಶ್ರೇಣಿಯನ್ನು ಗುರುತು ಮಾಡುವ ಮೊದಲು, ಈ ಪ್ರಶ್ನೆ ಪುಸ್ತಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಯಾವುದೇ ಪುಟ ಇಲ್ಲದಿರುವ ಅಥವಾ ಮುದ್ರಿತವಾಗದ ಪ್ರಶ್ನೆಗಳು ಇತ್ಯಾದಿ ಒಳಗೊಂಡಿಲ್ಲವೆಂಬುದನ್ನು ನೀವು ಪರೀಕ್ಷಿಸತಕ್ಕದ್ದು. ಮೇಲಿನ ಯಾವುದೇ ದೋಷ ಕಂಡುಬಂದಲ್ಲಿ ಅದನ್ನು ಹಿಂತಿರುಗಿಸಿ ಲಭ್ಯವಿರುವ ಶ್ರೇಣಿಯ ಪರಿಪೂರ್ಣವಾದ ಬೇರೆ ಪ್ರಶ್ನೆ ಪುಸ್ತಿಕೆಯನ್ನು ಪಡೆಯತಕ್ಕದ್ದು.
2. ಅಭ್ಯರ್ಥಿಯು ಪ್ರಶ್ನೆ ಪುಸ್ತಿಕೆಯ ವರ್ಷನ್ ಕೋಡ್ **A, B, C** ಅಥವಾ **D,** ಅನ್ನು ಮತ್ತು ನೋಂದಣಿ ಸಂಖ್ಯೆಯನ್ನು **OMR** ಉತ್ತರ ಪತ್ರಿಕೆಯಲ್ಲಿ ಅದಕ್ಕಾಗಿ ಒದಗಿಸಲಾಗಿರುವ ಸ್ಥಳದಲ್ಲಿ ಬರೆದು ಸಂಕೇತ (ಎನ್ ಕೋಡ್) ಗೊಳಿಸಬೇಕು. ಹಾಗೂ ನಿಗದಿತ ಸ್ಥಳದಲ್ಲಿ ತಾವು ಮತ್ತು ಸಂವೀಕ್ಷಕರು ಸಹಿ ಮಾಡಿರುವುದನ್ನು ಖಚಿತ ಪಡಿಸಿಕೊಳ್ಳಬೇಕು. ಓ.ಎಂ.ಆರ್. ಹಾಳೆಯಲ್ಲಿ ತಿಳಿಸಿರುವ ಯಾವುದೇ ಮಾಹಿತಿಯನ್ನು ಭರ್ತಿ ಮಾಡುವುದು/ಎನ್ ಕೋಡ್ ಮಾಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಭರ್ತಿ ಮಾಡದಿದ್ದಲ್ಲಿ/ತಪ್ಪಿದ್ದಲ್ಲಿ ಅಂತಹ ಓ.ಎಂ.ಆರ್. ಉತ್ತರ ಹಾಳೆಯನ್ನು ತಿರಸ್ಕರಿಸಲಾಗುವುದು.
3. ಪಕ್ಕದಲ್ಲಿ ಒದಗಿಸಿರುವ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

| ನೊಂದಣಿ ಸಂಖ್ಯೆ |
|---|
| |

4. ಈ ಪ್ರಶ್ನೆ ಪುಸ್ತಿಕೆ **100** ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು **4** ಉತ್ತರಗಳನ್ನು ಒಳಗೊಂಡಿರುತ್ತದೆ. ನೀವು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಬೇಕೆಂದಿನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ **ಅತ್ಯುತ್ತಮವೆನಿಸುವ** ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು ಕೇವಲ **ಒಂದು ಉತ್ತರವನ್ನು** ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ **ಪ್ರತ್ಯೇಕ** ಉತ್ತರ ಪತ್ರಿಕೆಯಲ್ಲಿ (OMR Sheet) ಕೇವಲ **ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್** ಪೆನ್ನಿನಲ್ಲಿ **ಮಾತ್ರ** ಗುರುತು ಮಾಡಬೇಕು. ಉತ್ತರ ಪತ್ರಿಕೆ ಹಾಳೆಯಲ್ಲಿನ ಸೂಚನೆಗಳನ್ನು ಗಮನಿಸುವುದು.
6. **ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿರಿ.**
7. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
8. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಉತ್ತರ ಪತ್ರಿಕೆಯ ಹಾಳೆಯಲ್ಲಿ ಇನ್ನಾವುದೇ ಗುರುತುಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಉತ್ತರ ಪತ್ರಿಕೆಯ ಹಾಳೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.

**ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯುನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.**

1. 'ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ' ಎಂದು ಹೇಳಿದ ಕವಿ ಯಾರು ?

(a) ರನ್ನ (b) ಪೊನ್ನ

(c) ಪಂಪ (d) ಶ್ರೀವಿಜಯ

2. ನಾಟಕೀಯತೆಯಿಂದ ಕೂಡಿದ ರನ್ನನ ಕೃತಿ

(a) ಅಜಿತ ಪುರಾಣ

(b) ಸಾಹಸಭೀಮ ವಿಜಯ (ಗದಾಯುದ್ಧ)

(c) ಪರಶುರಾಮಚರಿತ

(d) ಚಕ್ರೇಶ್ವರ ಚರಿತ

3. ಧರ್ಮಾಮೃತವನ್ನು ಬರೆದ ಕವಿ

(a) ದುರ್ಗಸಿಂಹ (b) ಚಾವುಂಡರಾಯ

(c) ನಯಸೇನ (d) ಶಾಂತಿನಾಥ

4. ಗಿರಿಜಾ ಕಲ್ಯಾಣ ಯಾವ ಪ್ರಕಾರಕ್ಕೆ ಸೇರುತ್ತದೆ ?

(a) ರಗಳೆ (b) ತ್ರಿಪದಿ

(c) ಚಂಪು (d) ಸಾಂಗತ್ಯ

5. ಚತುರ ಕವಿರಾಯ ಹಂಪೆಯ ಹರೀಶ್ವರನ ವರಸುತನೆಂದು ಹೇಳಿಕೊಂಡವರಾರು ?

(a) ರಾಘವಾಂಕ

(b) ಹರಿಹರ

(c) ಮಹಾದೇವಿಯಕ್ಕ

(d) ಕೆರೆಯ ಪದ್ಮರಸ

6. ಅಭಯರುಚಿ-ಅಭಯಮತಿಯರ ವಿವರ ದೊರೆಯುವ ಕೃತಿ

(a) ಅನಂತನಾಥ ಪುರಾಣ

(b) ಯಶೋಧರ ಚರಿತೆ

(c) ಅನುಭವ ಮುಕುರ

(d) ಅಜಿತಪುರಾಣ

7. 'ಕಬ್ಬಿಗರ ಕಾವ' ಕೃತಿಯ ಕರ್ತೃ

(a) ಗುಣವರ್ಮ (b) ಚೌಂಡರಸ

(c) ಮಲ್ಲಿಕಾರ್ಜುನ (d) ಆಂಡಯ್ಯ

8. 'ಪಂಪ ರಾಮಾಯಣ' ಎಂದು ಕರೆಯಲ್ಪಡುವ ಕೃತಿ

(a) ಆದಿಪುರಾಣ

(b) ಪೂರ್ವಪುರಾಣ

(c) ರಾಮಚಂದ್ರಚರಿತ ಪುರಾಣ

(d) ತೊರವೆ ರಾಮಾಯಣ

9. ತಿಳಿಯ ಹೇಳುವೆ ಕೃಷ್ಣಕಥೆಯನು ಇಳೆಯ ಜಾಣರು ಮೆಚ್ಚುವಂತಿರೆ ಎಂದವರು

(a) ಕುಮಾರವ್ಯಾಸ

(b) ಕುಮಾರ ವಾಲ್ಮೀಕಿ

(c) ಭಾಸ್ಕರ

(d) ಲಕ್ಕಣದಂಡೇಶ

10. ವಿರೂಪಾಕ್ಷ ಪಂಡಿತನ ಕೃತಿಯ ಹೆಸರು

(a) ಸೌಂದರ ಪುರಾಣ

(b) ರೇವಣಸಿದ್ದೇಶ್ವರ ಪುರಾಣ

(c) ಚೆನ್ನಬಸವ ಪುರಾಣ

(d) ಮಹಾದೇವಿಯಕ್ಕನ ಪುರಾಣ

**11.** ರತ್ನಾಕರಾಧೀಶ್ವರ ಶತಕವನ್ನು ಬರೆದ ಕವಿ

(a) ರತ್ನಾಕರವರ್ಣಿ

(b) ಸೋಮೇಶ್ವರ

(c) ಹರಿಹರ

(d) ನಾಗವರ್ಮಾಚಾರ್ಯ

**12.** ಸಿಂಗರಾರ್ಯನ ಶಿಷ್ಯೆ ಯಾರು ?

(a) ಹೆಳವನಕಟ್ಟೆ ಗಿರಿಯಮ್ಮ

(b) ಗಂಗಾಂಬಿಕೆ

(c) ಸಂಚಿ ಹೊನ್ನಮ್ಮ

(d) ನೀಲಾಂಬಿಕೆ

**13.** ಚಿತ್ರಾಂಗದ ಯಾವ ಪ್ರಕಾರಕ್ಕೆ ಸೇರಿದ ಕೃತಿ ?

(a) ಮಹಾಕಾವ್ಯ (b) ಖಂಡಕಾವ್ಯ

(c) ಗದ್ಯಕಾವ್ಯ (d) ದೀರ್ಘಕಾವ್ಯ

**14.** 'ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು' ಎಂದು ಕರೆಸಿಕೊಂಡ ಕೃತಿ

(a) ಅದ್ಭುತ ರಾಮಾಯಣ

(b) ಶ್ರೀರಾಮ ಪಟ್ಟಾಭಿಷೇಕ

(c) ರಾಮಾಶ್ವಮೇಧ

(d) ರತ್ನಾವತೀ ಕಲ್ಯಾಣ

**15.** ವಡ್ಡಾರಾಧನೆಯಲ್ಲಿ ಬಳಸಿರುವ ಶೈಲಿ

(a) ಕಂದ (b) ಷಟ್ಪದಿ

(c) ವಚನ (d) ಗದ್ಯ

**16.** ಕಾವ್ಯ ಪ್ರತಿಭೆಯನ್ನು ಕುರಿತು ಈ ಕೆಳಕಂಡ ಹೇಳಿಕೆಗಳನ್ನು ನೀಡಿದ ಕೃತಿ ಮತ್ತು ಕೃತಿಕಾರರು ಯಾರು ?

1. ಪ್ರಜ್ಞಾನವನವೋನ್ಮೇಷ ಶಾಲಿನೀ ಪ್ರತಿಭಾಮತ:

2. ಪ್ರಜ್ಞಾನವನವೋಲ್ಲೇಖ ಶಾಲಿನೀ ಪ್ರತಿಭಾಮತ:

3. ಪ್ರತಿಭಾ ಅಪೂರ್ವವಸ್ತು ನಿರ್ಮಾಣ ಕ್ಷಮತ್ವ.

(a) ಭಾಮಹನ ಕಾವ್ಯಾಲಂಕಾರ
ಮಮ್ಮಟನ ಕಾವ್ಯಪ್ರಕಾಶ
ಭಟ್ಟತೌತನ ಕಾವ್ಯಕೌತುಕ

(b) ಕ್ಷೇಮೇಂದ್ರನ ಔಚಿತ್ಯವಿಚಾರ
ನಾಗವರ್ಮನ ಕಾವ್ಯಾವಲೋಕನ
ಭರತನ ನಾಟ್ಯಶಾಸ್ತ್ರ

(c) ಭಟ್ಟಾತೌತನ ಕಾವ್ಯಕೌತುಕ
ಕ್ಷೇಮೇಂದ್ರನ ಔಚಿತ್ಯವಿಚಾರ
ಅಭಿನವಗುಪ್ತನ ಧ್ವನ್ಯಾಲೋಕ ಲೋಚನ

(d) ಮಮ್ಮಟನ ಕಾವ್ಯ ಪ್ರಕಾಶ
ದಂಡಿಯ ಕಾವ್ಯಾದರ್ಶ
ಕುಂತಕನ ವಕ್ರೋಕ್ತಿಜೀವಿತ

**17.** ಉಪಮೇಯ, ಉಪಮಾನ, ಉಪಮವಾಚಕ ಹಾಗೂ ಸಾಧಾರಣ ಧರ್ಮ ಲಕ್ಷಣವಿರುವ ಅಲಂಕಾರ ಯಾವುದು ?

(a) ರೂಪಕಾಲಂಕಾರ

(b) ಅರ್ಥಾಂತರನ್ಯಾಸಾಲಂಕಾರ

(c) ಉಪಮಾಲಂಕಾರ

(d) ದೀಪಕಾಲಂಕಾರ

18. ಯಾವ ಚಾಳುಕ್ಯ ರಾಜನನ್ನು 'ಸತ್ಯಾಶ್ರಯ' ಮತ್ತು 'ದಕ್ಷಿಣಾಪಥೇಶ್ವರ' ಎಂಬ ಬಿರುದಿನಿಂದ ಕರೆಯುತ್ತಾರೆ ?

(a) ಮಂಗಳೇಶ (b) 2 ನೇ ಕೃಷ್ಣ

(c) 2 ನೇ ಪುಲಿಕೇಶಿ (d) ಕೀರ್ತಿವರ್ಮ

19. 'ಆಮುಕ್ತ ಮಾಲ್ಯದ' ಮತ್ತು 'ಜಾಂಬವತಿ ಕಲ್ಯಾಣ' ಕೃತಿಗಳ ಕರ್ತೃ ಯಾರು ?

(a) ನೃಪತುಂಗ

(b) ಶ್ರೀಕೃಷ್ಣದೇವರಾಯ

(c) ಮಂಗಳೇಶ

(d) ಅಳಿಯ ರಾಮರಾಯ

20. ಬೆಟ್ಟದ ಏಕಶಿಲೆಯನ್ನು ಕೊರೆದು ಎಲ್ಲೋರದಲ್ಲಿ 'ಕೈಲಾಸ ದೇವಾಲಯ' ನಿರ್ಮಿಸಿದ ರಾಜ ಯಾರು ?

(a) 1 ನೆ ಪುಲಿಕೇಶಿ (b) ವಿಕ್ರಮಾದಿತ್ಯ

(c) 1 ನೇ ಕೃಷ್ಣ (d) ಕೀರ್ತಿವರ್ಮ

21. ಮೀಮಾಂಸಕರು ಮತ್ತು ಅವರ ಕೃತಿಗಳನ್ನು ಹೊಂದಿಸಿ.

A. ದಂಡಿ 1. ಕಾವ್ಯಾಲಂಕಾರ

B. ಮಮ್ಮಟ 2. ಕಾವ್ಯಾನುಶಾಸನ

C. ಭಾಮಹ 3. ಕಾವ್ಯಮೀಮಾಂಸಾ

D. ರಾಜಶೇಖರ 4. ಕಾವ್ಯ ಪ್ರಕಾಶ

5. ಕಾವ್ಯಾದರ್ಶ

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| | A | B | C | D |
|---|---|---|---|---|
| (a) | 1 | 4 | 2 | 3 |
| (b) | 1 | 3 | 5 | 4 |
| (c) | 5 | 4 | 1 | 3 |
| (d) | 3 | 2 | 4 | 5 |

22. ಮೀಮಾಂಸಕರು ಮತ್ತು ಅವರ ಹೇಳಿಕೆಗಳನ್ನು ಹೊಂದಿಸಿ.

A. ಭಾಮಹ 1. ರೀತಿರಾತ್ಮ ಕಾವ್ಯಸ್ಯ

B. ವಾಮನ 2. ಕಾವ್ಯಸ್ಯಾತ್ಮ ಧ್ವನಿಃ

C. ಆನಂದ ವರ್ಧನ 3. ವಾಕ್ಯಂರಸಾತ್ಮಕಂ ಕಾವ್ಯಂ

D. ವಿಶ್ವನಾಥ 4. ಶಬ್ದಾರ್ಥಸಹಿತೌ ಕಾವ್ಯಂ

5. ರಮಣೀಯಾರ್ಥ ಪ್ರತಿಪಾದಕಃ ಶಬ್ದಃ ಕಾವ್ಯಂ

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| | A | B | C | D |
|---|---|---|---|---|
| (a) | 4 | 1 | 2 | 3 |
| (b) | 5 | 4 | 1 | 2 |
| (c) | 3 | 5 | 2 | 1 |
| (d) | 1 | 2 | 5 | 4 |

23. ಪ್ರಸಿದ್ಧವಾದ 33 ಸಂಚಾರಿ ಭಾವಗಳನ್ನು ಬಣ್ಣಬಣ್ಣದ ಮಣಿಗಳಿಗೆ ಹೋಲಿಸುವ ಅಭಿನವಗುಪ್ತನು ಸ್ಥಾಯಿಭಾವವನ್ನು ಹೋಲಿಸುವುದು

(a) ಆ ಮಣಿಗಳನ್ನು ಪೋಣಿಸಿರುವ ದಾರಕ್ಕೆ

(b) ಮಣಿಗಳ ನಡುವೆ ಬೆಳಗುವ ಪದಕಕ್ಕೆ

(c) ಅವುಗಳನ್ನು ಧರಿಸಿದ ಸುಂದರಿಗೆ

(d) ಮಣಿಸರದ ಕೊಂಡಿಗೆ

**24.** ಭರತ ತನ್ನ ನಾಟ್ಯಶಾಸ್ತ್ರದಲ್ಲಿ ಹೇಳುವ ಪ್ರಸಿದ್ಧವಾದ ಎಂಟು ರಸಗಳೊಂದಿಗೆ ಒಂಬತ್ತನೆಯದನ್ನು ಸೇರಿಸಿ, 'ನವರಸ' ಗಳನ್ನು ಪ್ರತಿಷ್ಠಾಪಿಸಿದವನು ಮತ್ತು ಅವನು ಸೂಚಿಸಿದ ರಸ

(a) ಅಭಿನವ ಗುಪ್ತ -- ಸ್ನೇಹ

(b) ಭಾಮಹ -- ನಿರ್ವೇದ (ವೈರಾಗ್ಯ)

(c) ಆನಂದವರ್ಧನ -- ಭಕ್ತಿ

(d) ಅಭಿನವಗುಪ್ತ -- ಶಾಂತ

**25.** ಧ್ವನಿ ಪ್ರಸ್ಥಾನದ ಮೂರು ಅತಿ ಮುಖ್ಯ ತತ್ವಗಳೆಂದರೆ

(a) ಅಲಂಕಾರ-ಧ್ವನಿ-ರಸ

(b) ರಸ-ಧ್ವನಿ-ಔಚಿತ್ಯ

(c) ಛಂದಸ್ಸು-ಅಲಂಕಾರ-ಆನಂದ

(d) ಅಲಂಕಾರ-ಸೌಂದರ್ಯ-ಧ್ವನಿ

**26.** "ಬಯಕೆಗಳು ಬಸಿರುಗಳು ಹಡೆದಿದ್ದು ಹಿಂಗಿದ್ದು

ಮೂವತ್ತು ಮೂರು ಕೋಟಿ !

ಸೂಲಗಳು

ಮೂವತ್ತು ಮೂರು ಕೋಟಿ"

ಮೇಲ್ಕಂಡ ಪದ್ಯಭಾಗದಲ್ಲಿ ಬಳಕೆಯಾಗಿರುವ ಶಬ್ದಶಕ್ತಿ ಮೂಲಧ್ವನಿಯ ಪದವೆಂದರೆ

(a) ಬಸಿರುಗಳು

(b) ಮೂವತ್ತು ಮೂರು ಕೋಟಿ

(c) ಹಡೆದಿದ್ದು

(d) ಸೂಲಗಳು

**27.** ಕೆಳಗಿನ ಮತಧರ್ಮ ಮತ್ತು ಅವುಗಳ ಸಿದ್ಧಾಂತವನ್ನು ಹೊಂದಿಸಿ.

| | |
|---|---|
| A. ದ್ವೈತ | 1. ಪ್ರಪತ್ತಿ |
| B. ಅದ್ವೈತ | 2. ವೇದಾಂತ |
| C. ವಿಶಿಷ್ಟಾದ್ವೈತ | 3. ಷಟ್ಸ್ಥಲ |
| D. ವೀರಶೈವ | 4. ಅಹಂಬ್ರಹ್ಮಾಸ್ಮಿ |
| | 5. ತಾರತಮ್ಯ |

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| | A | B | C | D |
|---|---|---|---|---|
| (a) | 3 | 4 | 5 | 1 |
| (b) | 2 | 1 | 3 | 4 |
| (c) | 5 | 4 | 1 | 3 |
| (d) | 5 | 3 | 2 | 1 |

**28.** ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಈಸೂರಿನಲ್ಲಿ ನಮ್ಮ ಇತಿಹಾಸದ ಮಹತ್ವದ ಘಟನೆಯೊಂದು ಜರುಗಿತ್ತು. ಅದೆಂದರೆ,

(a) ಅಲ್ಲಿಗೆ ಗಾಂಧೀಜಿಯವರು ಆಗಮಿಸಿ ಭಾಷಣ ಮಾಡಿದ್ದರು.

(b) 1942 ರಲ್ಲಿ ಬ್ರಿಟಿಷ್ ಸರ್ಕಾರದ ಅಧಿಕಾರಿಗಳು ಮತ್ತು ರಾಷ್ಟ್ರಪ್ರೇಮಿ ಸಾರ್ವಜನಿಕರ ನಡುವೆ ಭಯಂಕರ ತಿಕ್ಕಾಟ ನಡೆದು, ಎರಡೂ ಪಕ್ಷದಲ್ಲಿ ಸಾವುನೋವುಗಳುಂಟಾದವು.

(c) ಅಲ್ಲಿ ಮಹದೇವಪ್ಪ ಮೈಲಾರ್ ಅವರನ್ನು ಗುಂಡಿಕ್ಕಿ ಕೊಲ್ಲಲಾಗಿತ್ತು.

(d) ಅಲ್ಲಿನ ವಾರ್ಷಿಕ ಜಾತ್ರೆಯಲ್ಲಿ ಬ್ರಿಟಿಷ್ ಸರ್ಕಾರ ಜನರನ್ನು ಚದುರಿಸಲು ಯಾವ ಪ್ರಚೋದನೆ-ಯೂ ಇಲ್ಲದೆ ಗುಂಡು ಹಾರಿಸಿ, 30 ಜನರ ಸಾವಿಗೆ ಕಾರಣವಾಯಿತು.

**29.** ಹೊಯ್ಸಳರಾಜರ ರಾಜ್ಯಭಾರ ನಿರ್ವಹಣೆಯಲ್ಲಿ ಬಹು ಪ್ರಮುಖ ಪಾತ್ರ ವಹಿಸುತ್ತಿದ್ದ ಐವರು ಸಶಕ್ತ ಮಂತ್ರಿಗಳ ಮಂಡಲಿಯೊಂದಿರುತ್ತಿತ್ತು. ಅದೆಂದರೆ,

(a) ಪಂಚಾಯತನ

(b) ಪಂಚ ಪ್ರಧಾನ

(c) ಪಂಚಾಚಾರ್ಯ

(d) ಪಂಚ ಪ್ರಮುಖ

**30.** ಈ ಕೆಳಗಿನ ವಿವರಗಳು ಯಾರನ್ನು ಕುರಿತಿದೆ ?

A. ಅವರು 'ವಾಗ್ಭೂಷಣ' ಮತ್ತು 'ಜಯ ಕರ್ನಾಟಕ' ಪತ್ರಿಕೆಗಳನ್ನು ಹೊರ ತಂದರು.

B. ಕರ್ನಾಟಕದ ಏಕೀಕರಣಕ್ಕೆ ಬಹುವಾಗಿ ಶ್ರಮಿಸಿದರು.

C. 1930 ರ 16ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

D. ಅವರಿಗೆ 'ಕರ್ನಾಟಕ ಕುಲಪುರೋಹಿತ' ಎಂಬ ಬಿರುದಿತ್ತು.

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(a) ದ.ರಾ. ಬೇಂದ್ರೆ

(b) ಆಲೂರು ವೆಂಕಟರಾವ್

(c) ಗುಲ್ವಾಡಿ ವೆಂಕಟರಾಯ

(d) ಬಿ.ಎಂ.ಶ್ರೀ

**31.** ಶ್ರೀಮತಿ ವಜ್ರಜಂಘರ ಮರಣವು ಯಾವುದರಿಂದ ಸಂಭವಿಸಿತು ?

(a) ಸರ್ಪ (b) ಧೂಪ

(c) ದೀಪ (d) ಬಾಣ

**32.** ಆದಿಪುರಾಣವು ಯಾವ ಕೃತಿಯನ್ನು ಆಧರಿಸಿದೆ ?

(a) ಪೂರ್ವಪುರಾಣ (b) ಜಿನಪುರಾಣ

(c) ಅಜಿತಪುರಾಣ (d) ಮಹಾಪುರಾಣ

**33.** ವಿದ್ಯೆಯಿಲ್ಲದವನ ಮುಖವನ್ನು ಸರ್ವಜ್ಞ ಹೀಗೆ ಬಣ್ಣಿಸಿದ್ದಾನೆ

(a) ಶಾರದೆ (b) ಕುಂಭಕರ್ಣ

(c) ಹಾಳೂರು ಹದ್ದು (d) ಕೋಗಿಲೆ

**34.** ಷಟ್ಪದಿ ಬ್ರಹ್ಮ ಎಂದು ಯಾರನ್ನು ಹೆಸರಿಸಲಾಗಿದೆ ?

(a) ಹರಿಹರ (b) ರಾಘವಾಂಕ

(c) ಪೊನ್ನ (d) ನಯಸೇನ

**35.** ಕನ್ನಾಜಿ, ಕಮಲಾಜಿ, ವಿಮಲಾಜಿ ಇವರು ಯಾವ ಕಾವ್ಯದಲ್ಲಿ ಬರುತ್ತಾರೆ ?

(a) ಭರತೇಶ ವೈಭವ

(b) ಧರ್ಮಾಮೃತ

(c) ಆದಿಪುರಾಣ

(d) ಚಾವುಂಡರಾಯಪುರಾಣ

**36.** "ನಿಚ್ಚಂ ಪೊಸತು ಅರ್ಣವಂಬೋಲ್ ಅತಿಗಂಭೀರಂ" ಎಂದದ್ದು ಈ ವಾಕ್ಯ ಯಾವ ಕಾವ್ಯದಲ್ಲಿ ಕಂಡು ಬರುತ್ತದೆ ?

(a) ವಿಕ್ರಮಾರ್ಜುನ ವಿಜಯ

(b) ಆದಿಪುರಾಣ

(c) ಕವಿರಾಜಮಾರ್ಗ

(d) ವಡ್ಡಾರಾಧನೆ

37. ಕಷ್ಟಗಳು ಓಡಿ ಬರಲಿ, ಕಷ್ಟಕ್ಕೆ ಭಯವೇಕೆ ಎಂಬ ಮಾತು ನುಡಿದವರು ಯಾರು ?

(a) ಬಸವಣ್ಣ (b) ಅಕ್ಕಮಹಾದೇವಿ

(c) ಸರ್ವಜ್ಞ (d) ಚೆನ್ನಬಸವಣ್ಣ

38. ಪಂಪನು ಋಣಿಯಾಗಿರುವ ತಮಿಳು ಕವಿ

(a) ಒಟ್ಟಕೂತ್ತರು

(b) ಕಂಬರ್

(c) ಶೇಕ್ಕಿೞಾರ್

(d) ಪೆರುಂದೇವನಾರ್

39. ಉತ್ತರ ಕುರು ಎಂದರೆ

(a) ಯೋಗಭೂಮಿ (b) ಭೋಗಭೂಮಿ

(c) ಜನ್ಮಭೂಮಿ (d) ರಣಭೂಮಿ

40. ಇಂದ್ರಕೀಲ ಪರ್ವತದಲ್ಲಿ ಅರ್ಜುನನು ಪಡೆದ ಅಸ್ತ್ರ

(a) ನಾರಾಯಣಾಸ್ತ್ರ (b) ವಾಯುವ್ಯಾಸ್ತ್ರ

(c) ವರುಣಾಸ್ತ್ರ (d) ಪಾಶುಪತಾಸ್ತ್ರ

41. ದುರ್ಯೋಧನನನ್ನು ಸೆರೆಹಿಡಿದಿದ್ದ ಗಂಧರ್ವ

(a) ರುಕ್ಮಾಂಗದ (b) ಚಿತ್ರಾಂಗದ

(c) ಅಂಗದ (d) ನಾರದ

42. ಹದಿನಾರನೆಯ ಮನು ಪ್ರಥಮ ಚಕ್ರೇಶ್ವರ

(a) ಭರತ (b) ಬಾಹುಬಲಿ

(c) ವಜ್ರಜಂಘ (d) ಲಲಿತಾಂಗದೇವ

43. "ಮುನಿಗೆ ಹೊಲೆಯಾವುದತಿ ಕೋಪ ಬದ್ಧದ್ವೇಷವನಿಮಿತ್ತ ವೈರ" ಎಂಬುದು

(a) ಸಿದ್ಧರಾಮಚಾರಿತ್ರದಲ್ಲಿದೆ

(b) ಗಿರಿಜಾಕಲ್ಯಾಣದಲ್ಲಿದೆ

(c) ಹರಿಶ್ಚಂದ್ರಕಾವ್ಯದಲ್ಲಿದೆ

(d) ಶರಭಚಾರಿತ್ರದಲ್ಲಿದೆ

44. "ವೀರೇಶಚರಿತೆ" ರಚನೆಯಾಗಿರುವ ಛಂದಸ್ಸು

(a) ವಾರ್ಧಕ ಷಟ್ಪದಿ

(b) ಭಾಮಿನಿ ಷಟ್ಪದಿ

(c) ಪರಿವರ್ಧಿನಿ ಷಟ್ಪದಿ

(d) ಉದ್ದಂಡ ಷಟ್ಪದಿ

45. ಹರಿಹರನ ನಂತರದ ಕವಿಗಳು ರಗಳೆಯನ್ನು ಬಳಸದಿರಲು ಕಾರಣ

(a) ಆದ್ಯಂತ ಪ್ರಾಸಬದ್ಧವಾಗಿರುವುದರಿಂದ

(b) ಶ್ರುತಿಕಷ್ಟವಾಗಿರುವುದರಿಂದ

(c) ಪದ್ಯದ ಗತಿಯಲ್ಲಿ ವೈವಿಧ್ಯವಿಲ್ಲದುದು

(d) ಷಟ್ಪದಿ ಪ್ರಚಾರಕ್ಕೆ ಬಂದುದು

46. ದೇಕಬ್ಬೆ ಶಾಸನ ಯಾವ ಕಲ್ಲಿಗೆ ಸಂಬಂಧಿಸಿದ್ದು ?

(a) ವೀರಗಲ್ಲು (b) ಮಾಸ್ತಿಕಲ್ಲು

(c) ನಿಷಧಿಕಲ್ಲು (d) ಸ್ಮಾರಕಕಲ್ಲು

47. ಒಂದನಾಡ ಹೋಗಿ ಒಂಬತ್ತನಾಡುವವರನ್ನು ಹೀಗೆಂದಿದ್ದಾರೆ

(a) ಹುಚ್ಚರು

(b) ಡಂಬಕರು

(c) ಮಾತಿನ ಮಲ್ಲರು

(d) ಬಾಯಿ ಬಡುಕರು

**48.** ಈ ಕೆಳಕಂಡವುಗಳನ್ನು ಸರಿ ಹೊಂದಿಸಿ.

| **ಲೇಖಕರು** | **ಕೃತಿಗಳು** |
|---|---|
| A. ಆಂಡಯ್ಯ | 1. ಚೆನ್ನಬಸವಪುರಾಣ |
| B. ವಿರೂಪಾಕ್ಷ | 2. ಅನುಭವಾಮೃತ |
| C. ಮಹಲಿಂಗರಂಗ | 3. ಭರತೇಶ ವೈಭವ |
| D. ರತ್ನಾಕರ ವರ್ಣಿ | 4. ಕಬ್ಬಿಗರ ಕಾವ |

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| | A | B | C | D |
|---|---|---|---|---|
| (a) | 4 | 1 | 2 | 3 |
| (b) | 2 | 3 | 1 | 4 |
| (c) | 1 | 4 | 2 | 3 |
| (d) | 4 | 2 | 3 | 1 |

**49.** ಈ ಕೆಳಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿ ಉತ್ತರವನ್ನು ಆಯ್ಕೆ ಮಾಡಿ.

**ಹೇಳಿಕೆ** : ತನ್ನ ಎತ್ತುಗಳು ಕರುಗಳಾಗಿದ್ದಾಗ ಯಾವ ಕಾಡಿನಲ್ಲಿ ದೊರೆಕಿದ್ದವೋ ಅಲ್ಲಿಗೆ ಹೋಗಿ ಬಿಟ್ಟು ಬಂದದ್ದು

**ಕಾರಣ** : ಮೇಲಿನ ಹೇಳಿಕೆಗೆ ಸರಿ ಕಾರಣವನ್ನು ಆಯ್ಕೆ ಮಾಡಿ.

(a) ಸ್ವಂತ ಬೇಸಾಯ ಮಾಡುವ ಆಸೆ ಕಳೆದುಕೊಂಡಿದ್ದರಿಂದ

(b) ಬೇಸಾಯ ಮಾಡುವ ವಯಸ್ಸು ಇಲ್ಲವಾದ್ದರಿಂದ

(c) ಹೊಲೆಯರು ಬೇಸಾಯವನ್ನು ಮಾಡಿದರೆ ಧನಿಯರು ದಂಡ ಹಾಕುತ್ತಾರೆಂದು

(d) ದುಡಿ ಭಾರಿಸಲು ಸಮಯವಿಲ್ಲ ವಾದ್ದರಿಂದ

**50.** ಚಂಡ ಪವನ ಎಂದರೆ

(a) ಬಿರುಗಾಳಿ

(b) ಸುಂಟರಗಾಳಿ

(c) ದೇಶಪ್ರೇಮದ ಗಾಳಿ

(d) ಸ್ವಾತಂತ್ರ್ಯದ ಗಾಳಿ

**51.** ಮುಕ್ಕಣ್ಣ ಎಂಬುದು

(a) ದೇವರು (b) ವ್ಯಕ್ತಿ

(c) ಶಕ್ತಿ (d) ಪ್ರಾಣಿ

**52.** ಇಲ್ಲಿಯ ಕತೆ ಮತ್ತು ಕತೆಗಾರರಲ್ಲಿ ಸರಿಯಾದುದನ್ನು ಪರಿಶೀಲಿಸಿ.

| | |
|---|---|
| 1. ನಮ್ಮೂರ ನಾಯಕರು | : ಶ್ರೀ ಕೋ.ಚನ್ನಬಸಪ್ಪ |
| 2. ನಾಲ್ಕು ಮೊಳ ಭೂಮಿ | : ಶ್ರೀ ಚದುರಂಗ |
| 3. ನಲ್ಲಿಯಲ್ಲಿ ನೀರು ಬಂತು | : ಶ್ರೀ ಸದಾಶಿವ |
| 4. ಮುಕ್ಕಣ್ಣನ ಮುಕ್ತಿ | : ಶ್ರೀ ಮಿರ್ಜಿ ಅಣ್ಣರಾಯ |

ಸರಿ ಉತ್ತರಗಳನ್ನು ಆಯ್ಕೆ ಮಾಡಿ.

(a) 1 ಮತ್ತು 4 (b) 1 ಮತ್ತು 2

(c) 2 ಮತ್ತು 3 (d) 3 ಮತ್ತು 4

**53.** ಚೋಮ ತನ್ನ ದುಡಿಯನ್ನು ಭಾರಿಸುವುದು

(a) ಮನಸ್ಸಿನ ಅಶಾಂತಿ ತಗ್ಗಿಸಿ-ಕೊಳ್ಳುವುದಕ್ಕಾಗಿ

(b) ಕೋಪವನ್ನು ಶಮನ ಮಾಡಿ-ಕೊಳ್ಳುವುದಕ್ಕಾಗಿ

(c) ಆಯಾಸವನ್ನು ಕಳೆದು-ಕೊಳ್ಳುವುದಕ್ಕಾಗಿ

(d) ಸಂತೋಷ ಪಡುವುದಕ್ಕಾಗಿ

**54.** ಈ ಕೆಳಗೆ ಕೊಟ್ಟಿರುವ ಹೇಳಿಕೆ ಮತ್ತು ವಿವರಣೆಗಳಲ್ಲಿ ಸರಿ ಉತ್ತರ ಆಯ್ಕೆ ಮಾಡಿ.

ಹೇಳಿಕೆ : ಕೊಳ್ ಗುರುದೇವ ನಿನಗೆ ದಕ್ಷಿಣೆ ಪೆರ್ ಬೆರಳಿದಂ

ವಿವರಣೆ : ದಕ್ಷಿಣೆಯಾಗಿ ದಕ್ಷಿಣದ ದಪ್ಪ ಬೆರಳು ತೆಗೆದುಕೋ ಗುರುದೇವ

ಸರಿ ಉತ್ತರವನ್ನು ಆಯ್ಕೆ ಮಾಡಿ.

(a) ಹೇಳಿಕೆ ತಪ್ಪು ವಿವರಣೆ ಸರಿ

(b) ಹೇಳಿಕೆ ಸರಿ ವಿವರಣೆ ಸರಿ

(c) ಹೇಳಿಕೆ ತಪ್ಪು ವಿವರಣೆ ತಪ್ಪು

(d) ಹೇಳಿಕೆ ಸರಿ ವಿವರಣೆ ತಪ್ಪು

**55.** ಗೋರೂರು ರಾಮಸ್ವಾಮಿ ಅಯ್ಯಂಗಾರ್‌ರ ಹೊಸಗನ್ನಡ ಪ್ರಬಂಧ ಸಂಕಲನ ಪ್ರಕಟಿಸಿರುವುದು

(a) ಕನ್ನಡ ಸಾಹಿತ್ಯ ಪರಿಷತ್ತು

(b) ಕೇಂದ್ರ ಸಾಹಿತ್ಯ ಅಕಾಡೆಮಿ

(c) ಕರ್ನಾಟಕ ಸಾಹಿತ್ಯ ಅಕಾಡೆಮಿ

(d) ಕನ್ನಡ ಪುಸ್ತಕ ಪ್ರಾಧಿಕಾರ

**56.** ಈ ಕೆಳಕಂಡ ಕವಿಗಳ ಕಾವ್ಯನಾಮಗಳನ್ನು ಸರಿ ಹೊಂದಿಸಿ.

| ಕವಿಗಳು | ಕಾವ್ಯನಾಮಗಳು |
|---|---|
| A. ಪಂಜೆ ಮಂಗೇಶರಾಯ | 1. ಶ್ರೀನಿವಾಸ |
| B. ವಿ.ಕೃ. ಗೋಕಾಕ್ | 2. ಆನಂದ ಕಂದ |
| C. ಮಾಸ್ತಿ ವೆಂಕಟೇಶ ಅಯ್ಯಂಗಾರ್ | 3. ಕವಿಶಿಷ್ಯ |
| D. ಕೃಷ್ಣ ಶರ್ಮ ಬೆಟಗೆರೆ | 4. ವಿನಾಯಕ |

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| | A | B | C | D |
|---|---|---|---|---|
| (a) | 2 | 4 | 3 | 1 |
| (b) | 1 | 3 | 2 | 4 |
| (c) | 3 | 4 | 1 | 2 |
| (d) | 4 | 2 | 3 | 4 |

**57.** ಕೆಳಕಂಡ ಕವಿಗಳ ಕಾಲಮಾನವನ್ನು ಹೊಂದಿಸಿ.

| ಕವಿಗಳು | ಕಾಲಮಾನ |
|---|---|
| A. ಹರಿಹರ | 1. ಕ್ರಿ.ಶ. 1430 |
| B. ಚಾಮರಸ | 2. ಕ್ರಿ.ಶ. 1200 |
| C. ಷಡಕ್ಷರಿ | 3. ಕ್ರಿ.ಶ. 1600 |
| D. ಲಕ್ಷ್ಮೀಶ | 4. ಕ್ರಿ.ಶ. 1653 |

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| | A | B | C | D |
|---|---|---|---|---|
| (a) | 3 | 2 | 1 | 4 |
| (b) | 4 | 3 | 2 | 1 |
| (c) | 2 | 1 | 4 | 3 |
| (d) | 1 | 2 | 3 | 4 |

**58.** ಈ ಕೆಳಗೆ ಕೊಟ್ಟಿರುವ ಹೇಳಿಕೆ ಮತ್ತು ಕಾರಣಗಳಲ್ಲಿ ಸರಿ ಉತ್ತರವನ್ನು ಆಯ್ಕೆ ಮಾಡಿ.

ಹೇಳಿಕೆ : ಜಗನ್ನಾಥನಿಗೆ ಹೊಲೆಯರು ಬಿಳಿ ಅಂಗಿ ತೊಟ್ಟು ಬಿಳಿ ಪಂಚೆ ಉಡುವ ಉಪಾಯ ಹೊಳೆದದ್ದು

ಕಾರಣ : ಮೇಲಿನ ಹೇಳಿಕೆಗೆ ಸರಿ ಕಾರಣವನ್ನು ಆಯ್ಕೆ ಮಾಡಿ.

(a) ಶುದ್ಧವಾಗಿರುತ್ತಾರೆಂದು

(b) ಗೌರವ ಸಿಗುತ್ತದೆಂದು

(c) ಚಂದಾಗಿ ಕಾಣುತ್ತಾರೆಂದು

(d) ಮುಟ್ಟಿಸಿಕೊಳ್ಳುತ್ತಾರೆಂದು

**59.** ಇಲ್ಲಿಯ ಕವಿ ಕವನಗಳಲ್ಲಿ ಸರಿಯಾದುದ್ದನ್ನು ಪರಿಶೀಲಿಸಿ.

| | |
|---|---|
| A. ಗಂಗಾಧರ ಚಿತ್ತಾಲ | 1. ಹರಿವ ನೀರು |
| B. ಜಿ.ಎಸ್. ಶಿವರುದ್ರಪ್ಪ | 2. ಕಾಲನಿಲ್ಲುವುದಿಲ್ಲ |
| C. ಪಿ. ಲಂಕೇಶ | 3. ಅವ್ವ |
| D. ಚಂದ್ರಶೇಖರ ಕಂಬಾರ | 4. ಪಾಂಡು ಮಾದ್ರಿ |

ಸರಿ ಉತ್ತರ ಆಯ್ಕೆ ಮಾಡಿ.

(a) 2 ಮತ್ತು 4 (b) 1 ಮತ್ತು 3

(c) 3 ಮತ್ತು 4 (d) 1 ಮತ್ತು 2

**60.** ಕೆಳಗಿನ ಆಧುನಿಕ ಸಾಹಿತ್ಯದ ಮಾರ್ಗಗಳನ್ನು ಸರಿಯಾದ ಕಾಲಾನುಕ್ರಮಣಿಕೆಯಲ್ಲಿ ಗುರುತಿಸಿ ಸರಿ ಉತ್ತರ ಆಯ್ಕೆ ಮಾಡಿ.

(a) ನವೋದಯ, ನವ್ಯ, ಪ್ರಗತಿಶೀಲ, ದಲಿತ, ಬಂಡಾಯ

(b) ನವೋದಯ, ನವ್ಯ, ಬಂಡಾಯ, ಪ್ರಗತಿಶೀಲ, ದಲಿತ

(c) ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ

(d) ನವೋದಯ, ನವ್ಯ, ಪ್ರಗತಿಶೀಲ, ಬಂಡಾಯ, ದಲಿತ

**61.** ಒಗಟುಗಳು ಜನಸಾಮಾನ್ಯರ

(a) ಭಾವನೆಯಿಂದ ಹುಟ್ಟಿದವುಗಳು

(b) ಪ್ರೀತಿಯಿಂದ ಹುಟ್ಟಿದವುಗಳು

(c) ಊಹನಾ ಶಕ್ತಿಯಿಂದ ಹುಟ್ಟಿದವುಗಳು

(d) ಒಡ್ಡುವ ಮತ್ತು ಬಿಡಿಸುವ ಒಂದು ಸಂತೋಷದ ಕ್ರಿಯೆ

**62.** ಇಂಗ್ಲಿಷಿನ Proverb ಶಬ್ದಕ್ಕೆ ಸಂವಾದಿಯಾದ ಕನ್ನಡದಲ್ಲಿರುವ ಶಬ್ದಗಳು ಯಾವುವು ?

(a) ಲೋಕಾಪವಾದ, ಲೋಕೋಕ್ತಿ

(b) ಜರ್ಬ್ಹಲ್, ಮಿಸಲ್

(c) ನಾಣ್ಣುಡಿ, ಗಾದೆ

(d) ಪ್ರವಾದ, ಲೋಕೋಕ್ತಿ

**63.** ಆಕಾರದಲ್ಲಿ ವಾಮನನಂತಿದ್ದರೂ ಅರ್ಥದಲ್ಲಿ

(a) ಮನಸ್ಸಿನ ಕನ್ನಡಿಯಂತಿದೆ

(b) ತ್ರಿವಿಕ್ರಮನಂತಿದೆ

(c) ಸರಳತೆಯಿಂದ ಕೂಡಿದೆ

(d) ವಿಶಿಷ್ಟತೆಯಿಂದಾಗಿದೆ

**64.** ಹಸಿದು ಹಲಸಿನ ಹಣ್ಣು ತಿನ್ನು ಉಂಡು

(a) ಬಾಳೆ ಹಣ್ಣು ತಿನ್ನು

(b) ಸೇಬಿನ ಹಣ್ಣು ತಿನ್ನು

(c) ಮಾವಿನ ಹಣ್ಣು ತಿನ್ನು

(d) ಬೇವಿನ ಹಣ್ಣು ತಿನ್ನು

**65.** ಗಾದೆ ದಿನ ನಿತ್ಯದ

(a) ಸಾಹಿತ್ಯದ ಭಾಗವಾಗಿಯೇ ಇರುತ್ತದೆ

(b) ಲಿಖಿತ ರೂಪದ ಭಾಗವಾಗಿಯೇ ಇರುತ್ತದೆ

(c) ನಡತೆಯ ಭಾಗವಾಗಿಯೇ ಇರುತ್ತದೆ

(d) ಭಾಷೆಯ ಭಾಗವಾಗಿಯೇ ಇರುತ್ತದೆ

**66.** ಸಂಕ್ಷಿಪ್ತತೆ, ಸಾರಗರ್ಭಿತತೆ ಚುರುಕು, ಲೋಕ ಪ್ರಿಯತೆ ಇವು ಗಾದೆಯ ಗುಣಗಳು ಎಂದು ಹೇಳಿದ ವಿದ್ವಾಂಸರು ಯಾರು ?

(a) ಲಾರ್ಡ್ ರಸ್ಸೆಲ್

(b) ಡಾ. ಹಾ.ಮಾ. ನಾಯಕ್

(c) ದೇವುಡು ನರಸಿಂಹ ಶಾಸ್ತ್ರಿಗಳು

(d) ಜೇಮ್ಸ್ ಎ. ಕೆಲ್ಲೋ

**67.** ಅಂಗೈಯಗಲ ಗದ್ದೆ, ಮುಂಗೈಯಗಲ ಬದು, ಉಳುವುದು ಎರಡು ಎತ್ತು, ಹಾಕುವುದು ಹದಿನಾರು ಬೀಜ ಒಗಟು ಬಿಡಿಸಿ.

(a) ಚಿನ್ನಿಕೋಲು

(b) ಪಗಡೆ ಹಾಸು, ಕಾಯಿ, ದಾಳ

(c) ಅಳುಗುಳಿ ಮೆಣೆ

(d) ಚೌಕಾಬಾರ

**68.** "ಕಾಂತೆಯರ ಮಾತಿನಂತಿರುವುದು ಕಾವ್ಯವಾದರೆ ಕಾಂತೆಯರ ಮಾತೆ ಕಾವ್ಯದ ಮಾತೆಯಲ್ಲವೆ" ಎಂದು ಗರತಿಯ ಹಾಡಿನ ಬಗ್ಗೆ ಅಭಿಪ್ರಾಯಪಟ್ಟವರು

(a) ಬಿ.ಎಂ. ಶ್ರೀ.

(b) ದ.ರಾ. ಬೇಂದ್ರೆ

(c) ಮಾಸ್ತಿ

(d) ಸಿಂಪಿ ಲಿಂಗಣ್ಣ

**69.** ಅಣ್ಣನ ಹೆಂಡತಿ ಕಣ್ಣೀಗಿ ಒಳ್ಳೇವಳು ಸುಣ್ಣದ ನೀರೆ ಒಲಿ ಮುಂದೆ || ಇಟಗೊಂಡು

(a) ಹಾಲೀನ ಪಾಯಾಸೆಂದು ಬಡಸ್ಯಾಳ

(b) ಆಡೀನಾಲೆಂದು ಬಿಡಿಸ್ಯಾಳ

(c) ಎಮ್ಮಿ ಹಾಲೆಂದು ಬಡಿಸ್ಯಾಳ

(d) ಹಸುವೀನ ಹಾಲೆಂದು ಬಡಿಸ್ಯಾಳ

**70.** ಗುಣಸಾಗರಿಯು ರುಂಡವನ್ನು ಹಾರಿಸಲು ಕೊಲೆಗಡುಕರಿಗೆ ಹೇಳಿದವನು

(a) ನಿರವಾಣಿ

(b) ಗುಣವಾಣಿ

(c) ಪರವಾಣಿ

(d) ಆದವಾಣಿ

**71.** ಮಲಸೆಟ್ಟಿಯು ತನ್ನ ಹೆಂಡತಿಗೆ ತಂದಿರುವ ಕುಪ್ಪಸ

(a) ಹಂಸಪುರಿ ಕುಪ್ಪಸ

(b) ಗರುಡಪುರಿ ಕುಪ್ಪಸ

(c) ನವಿಲಪುರಿ ಕುಪ್ಪಸ

(d) ಕಂಚಿ ಕುಪ್ಪಸ

**72.** ಒಂದು ಬೆಳ್ಳಿಯ ಗುದ್ದಲಿ ಒಂದು ಬಂಗಾರದ ಸಲಿಕೆ ತಂದು ಐದು ಪೆಟ್ಟು ಹಾಕಿದರೆ ದೇವರ ಗುಡಿಯು ಮೇಲೆ ಬರುತ್ತದೆ ಈ ವಾಕ್ಯ ಬರುವ ಕಥೆ

(a) ಬುದ್ಧಿವಂತ ಅಣ್ಣ

(b) ನೂರೊಂದು ಮಕ್ಕಳು

(c) ಅಕ್ಕ ತಂಗಿಯರು

(d) ಗಡ್ಡೇದ ಬಸವಣ್ಣ

**73.** 'ಪಂಥ ಗೆದ್ದವಳು' ಕಥೆಯನ್ನು ಹೇಳಿದ ಜನಪದ ಕಥೆಗಾರ

(a) ಚೆನ್ನಯ್ಯ

(b) ಲಿಂಗಪ್ಪ

(c) ಶಂಕರಪ್ಪ ಸಿದ್ಧರಾಮಪ್ಪ

(d) ಬಿ.ಎನ್. ರಂಗಸ್ವಾಮಿ

**74.** ಎಳಂದೂರು ಕಪಿಗೆ ಗೊತ್ತ _____

(a) ಎಮ್ಮೆ ಹಾಲಿನ ರುಚಿ

(b) ಎಳನೀರು ರುಚಿ

(c) ಎಳ್ಳೆಣ್ಣೆ ಜಳಕದ ರುಚಿ

(d) ಎಳ್ಳುಂಡೆ ರುಚಿ

**75.** ಕೂಸು ಕುದರೆ ಗಾತ್ರ ಮಾಸು ಮನೆ ಗಾತ್ರ ಕೂಸಿನವರ ತಾಯಿ ಸಾಸಿವೆ ಗಾತ್ರ

(a) ನವಣೆ (b) ಹಾರಕ

(c) ಗೋದಿ (d) ರಾಗಿ

**76.** ಕೆಳಗಿನವುಗಳನ್ನು ಸರಿ ಹೊಂದಿಸಿ.

| | ಲೇಖನ | | ಲೇಖಕ |
|---|---|---|---|
| A. | ಕರ್ನಾಟಕ ಭಾಷಾ ಭೂಷಣ | 1. | ಸ್ಟೂರ್ಟೆವಾಂಟ್ |
| B. | ಕನ್ನಡ ವ್ಯಾಕರಣ ಸೂತ್ರಗಳು | 2. | 2ನೇ ನಾಗವರ್ಮ |
| C. | ಭಾಷೆ ಎಂಬುದು ಯಾದೃಚ್ಛಿಕ ಧ್ವನಿ ಸಂಕೇತಗಳ ಒಂದು ವ್ಯವಸ್ಥೆ | 3. | ಕೇಶಿರಾಜ |
| D. | ಕೆಲವು ನಿಜ ಬಿಂದುಗಳ್, ಕೆಲವು ವಿಕಲ್ಪಾರ್ಥ ಬಿಂದುಗಳೆಂದು ಹೇಳಿದವರು | 4. | ಕಿಟಲ್ |

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| | A | B | C | D |
|---|---|---|---|---|
| (a) | 3 | 1 | 4 | 2 |
| (b) | 4 | 3 | 2 | 1 |
| (c) | 2 | 4 | 1 | 3 |
| (d) | 3 | 2 | 4 | 1 |

**77.** ಧ್ವನಿ ಸಂಕೇತಗಳಿಂದ ಮನುಷ್ಯನ ವಿಚಾರ-ಗಳನ್ನು ಅಭಿವ್ಯಕ್ತಗೊಳಿಸುವ ಸಾಧನವೇ ಭಾಷೆ ಎಂದು ಹೇಳಿದ ವಿದ್ವಾಂಸ ಯಾರು ?

(a) ಹೆನ್ರಿ ಸ್ವೀಟ್

(b) ಪ್ಲೇಟೊ

(c) ಎಬ್ಬಿಂಗ್ ಹೌಸ್

(d) ಎರ್ಡ್‌ಮಾನ್

**78.** ಒಂದು ದೇಶ ಅಥವಾ ಒಂದು ರಾಷ್ಟ್ರದ ಜನರಾಡುವ ಭಾಷೆಗಳನ್ನು ಒಂದು ಗುಂಪಾಗಿ ಮಾಡುವುದು

(a) ಜನಾಂಗಿಕ ವರ್ಗೀಕರಣ

(b) ಭೌಗೋಳಿಕ ವರ್ಗೀಕರಣ

(c) ರಾಚನಿಕ ವರ್ಗೀಕರಣ

(d) ವಾಂಶಿಕ ವರ್ಗೀಕರಣ

**79.** ಜಗತ್ತಿನ ದೊಡ್ಡ ಭಾಷಾ ಪರಿವಾರವೆಂದರೆ

(a) ಸಿನೋ-ಟಿಬೇಟಿಯನ್

(b) ಫಿನ್ನೊ-ಉಗ್ರಿಕ್

(c) ಇಂಡೊ-ಯೂರೋಪಿಯನ್

(d) ಡ್ರಾವಿಡಿಯನ್

**80.** ಭಾಷೆಯ ಉಗಮದ ಬಗ್ಗೆ ದೈವ ಮೂಲ ಸಿದ್ಧಾಂತ ಹೊರಬಂದ ಶತಮಾನ

(a) 16 ನೇ ಶತಮಾನ

(b) 18 ನೇ ಶತಮಾನ

(c) 14 ನೇ ಶತಮಾನ

(d) 12 ನೇ ಶತಮಾನ

**81.** ಇಂಗಿತ ಸಿದ್ಧಾಂತವನ್ನು ಮೊಟ್ಟ ಮೊದಲು ಸೂಚಿಸಿದ ಕೀರ್ತಿ

(a) ಡಾರ್ವಿನ್

(b) ರಾಯ್

(c) ರಿಚರ್ಡ್

(d) ಅಲೆಕ್ಸಾಂಡರ್ ಜೋಹಾನ್ಸನ್

**82.** ಕನ್ನಡ ವರ್ಣಮಾಲೆಯಲ್ಲಿ ದೇಶೀಯಾಕ್ಷರ-ಗಳು ಯಾವುವು ?

(a) ಯ, ರ, ಲ, ವ, ಶ, ಷ

(b) ಎ, ಒ, ಐ, ಔ, (ಱ) ೞ

(c) ಇ, ಈ, ಉ, ಊ, ಋ, ೠ

(d) ತ, ಥ, ದ, ಧ, ನ

**83.** 'ಗಾಥಾ ಸಪ್ತಶತಿ' ಯ ಕರ್ತೃ

(a) ನೃಪತುಂಗ (b) ಹಾಲರಾಜ

(c) ಚಾವುಂಡರಾಯ (d) ಪಂಪ

**84.** ಕೆಳಗಿನವುಗಳಲ್ಲಿ ಯಾವ ಭಾಷಾ ವರ್ಗೀಕರಣ ಹೆಚ್ಚು ವೈಜ್ಞಾನಿಕವಾಗಿದೆ ?

(a) ಭೌಗೋಳಿಕ (b) ರಾಚನಿಕ

(c) ಜನಾಂಗಿಕ (d) ವಾಂಶಿಕ

**85.** ಕನ್ನಡದ ಪ್ರಪ್ರಥಮ ಕಾವ್ಯಲಕ್ಷಣ ಗ್ರಂಥ

(a) ಕಾವ್ಯಾದರ್ಶ

(b) ಶಬ್ದಮಣಿದರ್ಪಣ

(c) ಕಾವ್ಯಾವಲೋಕನ

(d) ಕವಿರಾಜಮಾರ್ಗ

**86.** ಕನ್ನಡದ 'ಅಮಹತ್' ಶಬ್ದಗಳು ಯಾವ ಲಿಂಗವನ್ನು ಸೂಚಿಸುತ್ತವೆ ?

(a) ನಪುಂಸಕ ಲಿಂಗ (b) ಪುಲ್ಲಿಂಗ

(c) ಸ್ತ್ರೀಲಿಂಗ (d) ಯಾವುದೂ ಅಲ್ಲ

**87.** ಕನ್ನಡದಲ್ಲಿರುವ ಒಟ್ಟು ವಿಭಕ್ತಿಪ್ರತ್ಯಯಗಳು

(a) 6 (b) 7

(c) 8 (d) 9

88. 'ಕಾಲಸೂಚಕ ಪ್ರತ್ಯಯ'ಗಳು ಯಾವ ಪದಗಳಲ್ಲಿ ಕಂಡು ಬರುತ್ತವೆ ?

(a) ಸರ್ವನಾಮ (b) ಗುಣವಾಚಕ

(c) ಕ್ರಿಯಾಪದ (d) ನಾಮಪದ

89. ಕೇಶಿರಾಜನ ಪ್ರಕಾರ ಕನ್ನಡದ ಅಸಾಧಾರಣ ಲಕ್ಷಣಗಳ ಸಂಖ್ಯೆ

(a) 5 (b) 7

(c) 9 (d) 11

90. 'ಲಿಂಗಮೊಂಬತ್ತು ತೆಱಂ' ಈ ಮಾತನ್ನು ಹೇಳಿದವರು ಯಾರು ?

(a) ಭಟ್ಟಾಕಳಂಕ (b) ನಾಗವರ್ಮ

(c) ಕೇಶಿರಾಜ (d) ಶ್ರೀವಿಜಯ

91. ಭಾರತ ಸಂವಿಧಾನದ ಕೆಳಗಿನ ಯಾವ ವಿಧಿಯಲ್ಲಿ ಧರ್ಮದ ಅಬಾಧಿತವನ್ನು ಅವಲಂಬಿಸಿ, ಆಚರಣೆ ಮತ್ತು ಪ್ರಚಾರ ಕುರಿತಂತೆ ಮೂಲಭೂತವಾದ ಹಕ್ಕನ್ನು ವಿವರಿಸಲಾಗಿದೆ. ?

(a) 19 (b) 22

(c) 23 (d) 25

92. ಒಂದು ನಾಗರಿಕತೆಯನ್ನು ಆ ನಾಗರಿಕತೆ ಅಲ್ಪಸಂಖ್ಯಾತರನ್ನು ಹೇಗೆ ನಡೆಸಿಕೊಳ್ಳುತ್ತದೆ ಎಂಬುದನ್ನು ನೋಡಿ ಅಳೆಯಬಹುದು ಎಂದು ಈ ಕೆಳಗಿನ ಯಾವ ಮಹನೀಯರು ಹೇಳಿದ್ದಾರೆ ?

(a) ಮೌಲಾನಾ ಅಬ್ದುಲ್ ಕಲಾಂ

(b) ಮಹಾತ್ಮಾ ಗಾಂಧೀಜಿ

(c) ಎಪಿಜೆ ಅಬ್ದುಲ್ ಕಲಾಂ

(d) ಜವಾಹರ್‌ಲಾಲ್ ನೆಹರೂ

93. Multi Sectoral Development Programme ನ ಅಡಿಯಲ್ಲಿ ಕೆಳಕಂಡ ಕರ್ನಾಟಕ ರಾಜ್ಯದ ಯಾವ ಜಿಲ್ಲೆಗಳನ್ನು II ನೆಯ ಪಂಚವಾರ್ಷಿಕ ಯೋಜನೆ ಅಡಿಯಲ್ಲಿ ಮೊದಲ ಬಾರಿಗೆ ಆಯ್ದುಕೊಳ್ಳಲಾಗಿದೆ.

(i) ಮೈಸೂರು (ii) ಮಂಗಳೂರು

(iii) ಬೀದರ್ (iv) ಬಿಜಾಪುರ

(v) ಗುಲಬರ್ಗಾ (vi) ಧಾರವಾಡ

(a) (i), (iii), (v) (b) (iii), (v)

(c) (iii), (iv), (v) (d) ಮೇಲಿನ ಎಲ್ಲವೂ

94. ಮುಸ್ಲಿಂ ಸಮುದಾಯದ ಕಲ್ಯಾಣಕ್ಕಾಗಿ ಅವರ ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕ ಮಟ್ಟವನ್ನು ಅಭಿವೃದ್ಧಿ ಪಡಿಸಲು ಉನ್ನತ ಮಟ್ಟದ ಸಮಿತಿಯೊಂದನ್ನು ಪ್ರಧಾನ ಮಂತ್ರಿಯವರು 2005 ರಲ್ಲಿ ರಚಿಸಿ, ಅದರ ವರದಿಯನ್ವಯ ಈಗ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಆ ಸಮಿತಿಯ ಅಧ್ಯಕ್ಷರು ಈ ಕೆಳಗಿನವರಲ್ಲಿ ಯಾರು ?

(a) ಡಾ. ಅಖ್ತರ ಮಜೀದ್

(b) ರಾಜೇಂದರ್ ಸಚಾರ್

(c) ನಜ್ಮಾ ಹೆಪ್ತುಲ್ಲಾ

(d) ಡಾ. ಹಮೀದ್ ಅನ್ಸಾರಿ

95. ಕೆಳಕಂಡ ಯಾವ ರಾಜ್ಯಗಳಲ್ಲಿ ಅಲ್ಪಸಂಖ್ಯಾತರೆಂದು ಕೇಂದ್ರ ಸರಕಾರದಿಂದ ಘೋಷಿತ ಸಮುದಾಯ, ಬಹುಸಂಖ್ಯಾತ ಸಮುದಾಯವು ಇದೆ ?

(i) ಕೇರಳ (ii) ನಾಗಾಲ್ಯಾಂಡ್

(iii) ಒರಿಸ್ಸಾ (iv) ಮೇಘಾಲಯ

(v) ಪಂಜಾಬ್

(a) (i) (iii) (iv)

(b) (iii) (iv) (v)

(c) (ii) (iv) (v)

(d) (i) (ii) (iii) (iv) (v)

**96.** ಪ್ರಧಾನ ಮಂತ್ರಿಗಳ 15 ಅಂಶ ಕಾರ್ಯ-ಕ್ರಮವನ್ನು ಜಾರಿಗೊಳಿಸಲು ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಸಮುದಾಯದ ಕನಿಷ್ಠ ಜನಸಂಖ್ಯೆಯ ಮಟ್ಟ, ಈ ಕೆಳಕಂಡ ಎಷ್ಟು ಶೇಕಡಾವಾರು ಆಗಿರಬೇಕು ?

(a) 15% (b) 20%

(c) 25% (d) 30%

**97.** ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನದಲ್ಲಿ ಆರನೆಯ ತರಗತಿಯಿಂದ 10ನೆಯ ತರಗತಿ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಕೆಳಕಂಡ ಎರಡು ಹೇಳಿಕೆಗಳನ್ನಾಧರಿಸಿ ಸರಿಯಾದ ಉತ್ತರ ಗುರುತಿಸಿ.

(i) ಪ್ರವೇಶ ಫೀಯನ್ನು 500 ರೂಗಳ ಗರಿಷ್ಠ ಮಟ್ಟಕ್ಕೆ ನಿಗದಿಪಡಿಸಲಾಗಿದೆ.

(ii) ಟ್ಯೂಷನ್ ಫೀಯನ್ನು 350 ರೂಗಳ ಗರಿಷ್ಠ ಮಟ್ಟಕ್ಕೆ ನಿಗದಿಪಡಿಸಲಾಗಿದೆ.

(a) ಕೇವಲ (i) ಸರಿ

(b) ಕೇವಲ (ii) ಸರಿ

(c) (i) ಮತ್ತು (ii) ತಪ್ಪು

(d) (i) ಮತ್ತು (ii) ಸರಿ

**98.** ರಾಜ್ಯಗಳಲ್ಲಿ ಅಲ್ಪಸಂಖ್ಯಾತರ ಸಮುದಾಯದ ಮೆಟ್ರಿಕ್ ಪೂರ್ವ ಮಕ್ಕಳ ವಿದ್ಯಾರ್ಥಿವೇತನದಲ್ಲಿ ರಾಜ್ಯ ಮತ್ತು ಕೇಂದ್ರದ ಪಾಲಿಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

(a) 25 : 75 (b) 50 : 50

(c) 75 : 25 (d) 0 : 100

**99.** (i) ಕರ್ನಾಟಕ ರಾಜ್ಯ ವಲಯದ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕಾಗಿ ನಿಗದಿಪಡಿಸಿದ ಆದಾಯಮಿತಿ ರೂ. 6.00 ಲಕ್ಷ

(ii) ಕರ್ನಾಟಕ ರಾಜ್ಯ ವಲಯದ ಅಲ್ಪಸಂಖ್ಯಾತರ ಮಹಿಳೆಯರಿಗೆ ಕೌಶಲ್ಯ ಅಭಿವೃದ್ಧಿ ಮತ್ತು ತರಬೇತಿ ಯೋಜನೆಗಾಗಿ ನಿಗದಿಪಡಿಸಿದ ಆದಾಯಮಿತಿ ರೂ. 4.50 ಲಕ್ಷ

(a) ಕೇವಲ (i) ಸರಿ

(b) ಕೇವಲ (ii) ಸರಿ

(c) (i) ಮತ್ತು (ii) ಸರಿ

(d) (i) ಮತ್ತು (ii) ತಪ್ಪು

**100.** "ನಯಿ ಉಡಾನ" ಎಂಬ ಅಲ್ಪಸಂಖ್ಯಾತರ ಕಲ್ಯಾಣ ಯೋಜನೆ ಈ ಕೆಳಕಂಡ ವರ್ಗದ ಗುಂಪಿಗೆ ಸಂಬಂಧಿಸಿದ್ದಾಗಿದೆ.

(a) ಮಹಿಳಾ ಸಬಲೀಕರಣ, SHG ಗುಂಪುಗಳಿಗೆ ಆರ್ಥಿಕ ಸಯಾಯ

(b) ವಿದೇಶದಲ್ಲಿ ಉನ್ನತ ವ್ಯಾಸಂಗ

(c) ಕೇಂದ್ರಲೋಕ ಸೇವಾ ಆಯೋಗ ಮತ್ತು ರಾಜ್ಯ ಲೋಕ ಸೇವಾ ಆಯೋಗದ ಪರೀಕ್ಷೆಗಳಿಗೆ ತರಬೇತಿ.

(d) ದುಡಿಯುವ ಕೈಗಳಿಗೆ ಕೆಲಸ

ಚಿತ್ತು ಬರಹಕ್ಕಾಗಿ ಸ್ಥಳ